ದಿನಾಂಕ 07.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-**

ದಾವಾ ಎ ಅನುಸೂಚಿ ಸ್ವತ್ತಿನ ಬಗ್ಗೆ ನನಗೆ ಗೊತ್ತಿದೆ. ಸದರಿ ಸ್ವತ್ತುಗಳ ಸರ್ವೆ ನಂಬರ 400/17, 400/28. ಸರ್ವೆ ನಂಬರ 400/17 ರಲ್ಲಿ ಅಂದಾಜು 1 ಎಕರೆ 28 ಸೆಂಟ್ಸ್ ಹಾಗೂ ಸರ್ವೆ ನಂಬರ್ 400/28 ರಲ್ಲಿ 1 ಎಕರೆ 79 ಸೆಂಟ್ಸ್ ಜಾಗ ಇದೆ. ಸದರಿ ಸ್ವತ್ತುಗಳು ಮೊದಲು ನನ್ನ ತಾಯಿಗೆ ಸೇರಿದ್ದವು. ನನ್ನ ತಾಯಿಯು ಮೃತರಾದ ಬಳಿಕ ಆ ಆಸ್ತಿಗಳು ನನ್ನ ಹೆಸರಿಗೆ ಬಂದಿರುತ್ತವೆ. ನನಗೆ ಮೂರು ಜನ ಅಕ್ಕ ತಂಗಿಯರು ಇದ್ದಾರೆ. ನನ್ನ ತಾಯಿಯ ಆಸ್ತಿಗಳನ್ನು ನಾನು ಮತ್ತು ಅಕ್ಕ ತಂಗಿಯರು ಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಾಯಿಯು ಖರೀದಿಸಿದ ಬಗ್ಗೆ ನನ್ನ ಬಳಿ ಕ್ರಯಪತ್ರವಿದೆ. 2004 ರಲ್ಲಿ ನನ್ನ ಹೆಸರಿಗೆ ಸಿ.ಆರ್.ಸಿ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆ. ಆ ಸಂದರ್ಭದಲ್ಲಿ ಅಳತೆ ಮಾಡಿಸಿರುತ್ತೇನೆ. ಸರ್ವೆ ಸ್ಕೆಚ್ ನನ್ನ ಬಳಿ ಇರುವುದಿಲ್ಲ. ನಂತರ ಯಾವತ್ತೂ ನಾನು ನಮ್ಮ ಸ್ವತ್ತುಗಳನ್ನು ಅಳತೆ ಮಾಡಿಸಿರುವುದಿಲ್ಲ.

ನಮ್ಮ ಆಸ್ತಿಗಳು ಕುಟ್ಟದಿಂದ ಹುಣಸೂರಿಗೆ ಹೋಗುವ ರಸ್ತೆಯ ಪೂರ್ವ ದಿಕ್ಕಿಗೆ ಇವೆ. ನಮ್ಮ ಸರ್ವೆ ನಂಬರ 400/17 ರ ಉತ್ತರ ದಿಕ್ಕಿಗೆ ವಾದಿಗೆ ಸೇರಿದ ಸರ್ವೆ ನಂಬರ 419 ರ ಜಮೀನು ಇದೆ. ವಾದಿಯು ತನ್ನ ಜಮೀನಿನ ಯಾವ ದಿಕ್ಕಿಗೂ ಬೇಲಿ ಹಾಕಿರುವುದಿಲ್ಲ ಹಾಗೂ ವ್ಯವಸಾಯ ಮಾಡಿರುವುದಿಲ್ಲ. ನಾನು

ಸರ್ವೆ ನಂಬರ 400/17 ರ ಜಮೀನಿಗೆ ಬೇಲಿ ಹಾಕಿ ವ್ಯವಸಾಯ ಮಾಡುತ್ತಿದ್ದೇನೆ. ನಮ್ಮ ಜಮೀನಿನಲ್ಲಿ ಇರುವ ಕಾಫಿ ಗಿಡಗಳಿಗೆ 35 ವರ್ಷ ಆಗಿದೆ. ಸರ್ವೆ ನಂಬರ 419 ಕ್ಕೆ ಹೊಂದಿಕೊಂಡಂತೆ ವಾದಿಗೆ ಬೇರೆ ಜಮೀನು ಇದ್ದು, ಅದರ ಸರ್ವೆ ನಂಬರ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರಲ್ಲಿ ವಾದಿಯು ಕಾಫಿ ಮತ್ತು ಅಡಕೆ ಕೃಷಿ ಮಾಡಿದ್ದಾರೆ. ಅದರಲ್ಲಿ ಕೆರೆಯಾ ಸಹಾ ಇದೆ. ವಾದಿಯ ಆಸ್ತಿಯು ಒಂದೇ ಚೆಕ್ಕುಬಂಧಿಯಲ್ಲಿ ಇದೆ. ಕುಟ್ಟದಿಂದ ಹುಣಸೂರಿಗೆ ಹೋಗುವ ರಸ್ತೆಯ ಯಾವ ದಿಕ್ಕಿಗೆ ವಾದಿಯ ಆಸ್ತಿ ಇದೆ ಎಂಬುದು ನನಗೆ ಗೊತ್ತಿಲ್ಲ.

ವಾದಿಯ ತಂದೆಯ ಹೆಸರು ಕ್ಯಾಪ್ಟನ್ ಚಂಗಪ್ಪ. ಅವರಿಗೆ ಒಟ್ಟು 120 ಎಕರೆ ಜಮೀನು ಇತ್ತು. ಅವರಿಗೆ ಇಬ್ಬರು ಮಕ್ಕಳು. ದೊಡ್ಡ ಮಗ ಬೆಳ್ಳಿಯಪ್ಪ, ಮಗಳು ವಾದಿ. ಚಂಗಪ್ಪ ಮತ್ತು ಬೆಳ್ಳಿಯಪ್ಪನ ನಡುವೆ ಆಸ್ತಿಗಳು ಪಾಲು ಆಗಿತ್ತು. ವಿಭಾಗ ಯಾವಾಗ ಆಯಿತು ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂಬರ 419 ವಾದಿಗೆ ಸೇರಿದ ಬಗ್ಗೆ ಪಹಣಿಯನ್ನು ನೋಡಿರುತ್ತೇನೆ. ಸದರಿ ಸ್ವತ್ತು ವಾದಿಗೆ ಸೇರಿದ ಸ್ವತ್ತು ಎಂಬ ವಿಚಾರ ದಾವೆ ಹೂಡಿದ ಬಳಿಕ ನನಗೆ ಗೊತ್ತಾಗಿರುತ್ತದೆ. ನನ್ನ ಆಸ್ತಿಗೆ ಹೊಂದಿಕೊಂಡಂತೆ ಯಾರ ಆಸ್ತಿಗಳು ಇವೆ ಎಂಬುದು ನನಗೆ ದಾವೆ ಹಾಕುವ ಮುಂಚೆ ಗೊತ್ತಿರಲಿಲ್ಲ. ನನ್ನ ಆಸ್ತಿಗಳ ಪೂರ್ವಕ್ಕೆ ಮಲ್ಲಂಗಡ ಜಯಪ್ರಕಾಶ್, ಪಶ್ಚಿಮಕ್ಕೆ ಬೊಳ್ಳೇರ ನೂವಿನ್, ಉತ್ತರಕ್ಕೆ ಅರಣ್ಯ ಪ್ರದೇಶ, ದಕ್ಷಿಣಕ್ಕೆ ವಾದಿಯ ಜಮೀನು ಇದೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.